# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 107

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ನಿರಾಣಿ ಹನುಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 15.07.2024

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಒಂದು ಕುಟುಂಬದಲ್ಲಿ ಒಬ್ಬ ಸದಸ್ಯ ಮಾತ್ರ ವಾಸುಸುತ್ತಿದ್ದರೆ, ಅವರಿಗೆ ಪಡಿತರ ಚೀಟಿಯನ್ನು ನೀಡದಿರಲು ಕಾರಣವೇನು; ಇದರಿಂದ ಆ ವ್ಯಕ್ತಿ ಪಡಿತರ ಸೇವೆಯಿಂದ ವಂಚಿತರಾಗುವುದಿಲ್ಲವೇ; | ಒಬ್ಬ ಸದಸ್ಯರಿರುವಂತಹ ಕುಟುಂಬಗಳಿಗೂ ಸಹ ಪಡಿತರ ಚೀಟಿಯನ್ನು ವಿತರಿಸಲಾಗುತ್ತಿದೆ. |
| ಆ | ಇತ್ತೀಚೆಗೆ ಪಡಿತರ ಚೀಟಿ ತಿದ್ದುಪಡಿಗೆ ಕೇವಲ ಏಳು ದಿನಗಳ ಕಾಲಾವಕಾಶ ನೀಡಿರುವುದು ನಿಜವೇ; ನಿಜವಿದ್ದಲ್ಲಿ, ಕೇವಲ ಏಳು ದಿನಗಳಲ್ಲಿ ರಾಜ್ಯಾದಂತ ಅರ್ಜಿ ಸಲ್ಲಿಸುವಾಗ ಸರ್ವರ್ ಸಮಸ್ಯೆ ಎದುರಿಸುತ್ತಿರುವುದರಿಂದ ಸಮಸ್ಯೆ ಬಗೆ ಹರಿಸುವಂತೆ ಸಾರ್ವಜನಿಕರು ಸಹಾಯವಾಣಿ ಹಾಗೂ ಸಂಬಂಧಪಟ್ಟಇಲಾಖೆಯ ಅಧಿಕಾರಿಗಳಿಗೆ ಕರೆ ಮಾಡಿದರೂ ಸಹ ಸೂಕ್ತ ರೀತಿಯಲ್ಲಿ ಸಾರ್ವಜನಿಕರಿಗೆ ಸ್ಪಂಧಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮ ಮತ್ತು ಸರ್ವರ್ ಸಮಸ್ಯೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು; | ಪ್ರಸ್ತುತ ಪಡಿತರ ಚೀಟಿ ತಿದ್ದುಪಡಿಗೆ ನಿರಂತರವಾಗಿ ಅವಕಾಶವನ್ನುಕಲ್ಪಿಸಲಾಗಿರುತ್ತದೆ. ಸರ್ವರ್ ಸಮಸ್ಯೆಯನ್ನು ಬಗೆಹರಿಸಲು ಆಹಾರ ತಂತ್ರಾಂಶವನ್ನು NIC ಯಿಂದ KSDC (Karnataka State Data Centre )ಗೆ ವರ್ಗಾಯಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಇ | ಪಡಿತರ ತಿದ್ದುಪಡಿಯ ಪೋರ್ಟಲ್‌ನ್ನು ಯಾವ ಕಂಪನಿಯು ನಿರ್ವಹಿಸುತ್ತಿದೆ; ಪ್ರತಿ ಬಾರಿಯು ಇಲಾಖೆಯು ಸರ್ವರ್ ಸಮಸ್ಯೆಯನ್ನು ಎದುರುಸುತ್ತಿರುವುದರಿಂದ ಸದರಿ ಕಂಪನಿಯನ್ನು | ಪಡಿತರ ತಿದ್ದುಪಡಿಯ ಪೋರ್ಟಲ್‌ನ್ನು NIC ರವರು ನಿರ್ವಹಿಸುತ್ತಿರುತ್ತಾರೆ. ಇಲಾಖೆಯಲ್ಲಿ ಬಳಸಲಾಗುತ್ತಿರುವ ಸರ್ವರ್ ಗಳು ಬಹಳ ಹಳೆಯದಾಗಿದ್ದು, ಸದರಿ ಸರ್ವರ್‌ಗಳ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಈ |

| | | |
|---|---|---|
| | ಬದಲಾಯಿಸಬಹುದಲ್ಲವೇ; ತಿದ್ದುಪಡಿ ಪೋರ್ಟಲ್‌ನ್ನು ನಿರ್ವಹಿಸಲು ಈ ಕಂಪನಿಗೆ ನಿಗದಿಪಡಿಸಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಕಾರಣದಿಂದಾಗಿ ಎನ್.ಐ.ಸಿ ಯಿಂದ ಕೆ.ಎಸ್.ಡಿ.ಸಿ **(Karnataka State Data Centre)** ಗೆ ಆಹಾರ ತಂತ್ರಾಂಶದ **Migration** ಕಾರ್ಯವು ಪ್ರಗತಿಯಲ್ಲಿರುತ್ತದೆ. **NIC** ರವರಿಗೆ ಆಹಾರ ತಂತ್ರಾಂಶವನ್ನು ನಿರ್ವಹಿಸಲು ಪ್ರತಿ ವರ್ಷ ರೂ. **20** ಲಕ್ಷವನ್ನು ಪಾವತಿಸಲಾಗುತ್ತಿದೆ. |
| ಈ | ಸರ್ವರ್ ಸಮಸ್ಯೆ ಹೆಚ್ಚಾಗಿರುವುದರಿಂದ ತಿದ್ದುಪಡಿಯ ಸಮಯವನ್ನು **15-20** ದಿನಗಳ ಕಾಲ ವಿಸ್ತರಿಸಲಾಗುವುದೇ? | ಪ್ರಸ್ತುತ ಪಡಿತರ ಚೀಟಿ ತಿದ್ದುಪಡಿಗೆ ಪ್ರತಿ ದಿನ ಬೆಳಿಗ್ಗೆ **10.00** ರಿಂದ ಸಂಜೆ **7.00** ಗಂಟೆಯವರೆಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |

ಆನಾಸ **196** ಡಿಆರ್‌ಎ **2024** (ಇ-ಆಫೀಸ್)

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು